



### ಸಕಾರಣ

ಕಿಟ್ಟು: ನನ್ನಪ್ಪನ ಒಂದು ಕೂದಲನ್ನು ಕೂಡಾ ಯಾರೂ ಅಲುಗಾಡಿಸಲು ಸಾಧ್ಯವಿಲ್ಲ.

ಪುಟ್ಟು: ಏಕೆ, ಅವರಷ್ಟು ಪ್ರಭಾವಶಾಲಿಯೆ?

ಕಿಟ್ಟು: ಹಾಗೇನಿಲ್ಲ, ಅವರದು ಬಕ್ಕ ತಲೆ!

★★★

### ಸೇಲ್ಸ್ ಮ್ಯಾನ್?

ಪುಟ್ಟ: ಅಪ್ಪಾ, ಬಾಗಿಲಲ್ಲಿ ಯಾರೋ ಬಂದಿದ್ದಾರೆ.

ಅಪ್ಪ ( ಒಳಗಿನಿಂದಲೇ): ಯಾರದು?

ಪುಟ್ಟ: ಯಾರೋ ಮೀಸೆಯವರು.

ಅಪ್ಪ: ಬೇಡವೆಂದು ಹೇಳು...!

★★★

### ಸಮಯ ಪ್ರಜ್ಞೆ!

ಪತ್ನಿಯ ಮೇಲ್ತುಟಿಗೆ ಸ್ವಲ್ಪ ಗಾಯವಾಗಿತ್ತು. ಗುಂಡ ಡಾಕ್ಟರ್ ಬಳಿ ಕರೆ ತಂದು. ಡಾಕ್ಟರ್ ಔಷಧಿ ಹಚ್ಚಿ ಹೊಲಿಗೆ ಹಾಕಲಾರಂಭಿಸಿದರು. ತದೇಕಚಿತ್ತನಾಗಿ ಅದನ್ನೇ ಗಮನಿಸುತ್ತಿದ್ದ ಗುಂಡ ಕೂಡಲೇ ಎದ್ದು ಡಾಕ್ಟರ್ ಕಿವಿಯಲ್ಲಿ ಉಸುರಿದ,

'ಎರಡೂ ತುಟಿಗಳನ್ನೂ ಸೇರಿಸಿ ಹೊಲಿಗೆ ಹಾಕಲು ಫೀಸು ಎಷ್ಟಾಗುತ್ತದೆ?'

★★★

### ಸಬೂಬು!

ರಾತ್ರಿ ಗಂಟೆ 12 ಹೊಡೆದರೂ ಪುಟ್ಟ ಮಲಗಿರಲಿಲ್ಲ.

ಪುಟ್ಟ: ಅಮ್ಮಾ, ನನಗೊಂದು ಕಥೆ ಹೇಳು.

ಅಮ್ಮ: ತಾಳು ಮಗನೇ... ಇನ್ನು ಸ್ವಲ್ಪ ಹೊತ್ತಲ್ಲಿ ನಿನ್ನಪ್ಪ ಮನೆಗೆ ಬರುತ್ತಾರೆ ಮತ್ತು ನಮಗಿಬ್ಬರಿಗೂ ಒಂದು ಹೊಸ ಕಥೆ ಕಟ್ಟಿ ಹೇಳುತ್ತಾರೆ!

★★★

### ಲಿಂಗಪತ್ತೆ

ಪುಟ್ಟ: ಅಪ್ಪಾ, ಬೆಡ್‌ರೂಂನಲ್ಲಿ ನಾನೀಗ 3 ನೊಣಗಳನ್ನು ಹೊಡೆದೆ. ಅವುಗಳಲ್ಲಿ 2 ಹೆಣ್ಣು ಹಾಗೂ 1 ಗಂಡು ನೊಣವಾಗಿತ್ತು.

ಅಪ್ಪ: ಆದರೆ ಪುಟ್ಟಾ... ಅವುಗಳಲ್ಲಿ 2 ಹೆಣ್ಣು ಹಾಗೂ 1 ಗಂಡು ನೊಣವೆಂದು ನೀನು ಹೇಗೆ ಪತ್ತೆ ಹಚ್ಚಿದೆ?

ಪುಟ್ಟ: ತುಂಬಾ ಸುಲಭ, ಒಂದು ನೊಣ ನಿಮ್ಮ ವ್ಹಿಸ್ಕಿಯ ಬಾಟಲ್ ಮೇಲೆ ಕೂತಿತ್ತು ಹಾಗೂ ಎರಡು ನೊಣಗಳು ಕನ್ನಡಿಯೆದುರು ಹಾರಾಡುತ್ತಿದ್ದವು!

★★★

### ಗೊತ್ತಿಲ್ಲ

ಮಗ: ಅಪ್ಪಾ, ಮದುವೆಯಲ್ಲಿ ಒಟ್ಟು ಎಷ್ಟು ಖರ್ಚಾಗುತ್ತದೆ?

ಅಪ್ಪ: ನನಗಿನ್ನೂ ಗೊತ್ತಿಲ್ಲ ಕಣೋ, ನಾನು ಈಗಲೂ ಸಂದಾಯ ಮಾಡುತ್ತಲೇ ಇದ್ದೇನೆ!

(ಸಂ): ರಮಣ್‌ಶೇಟ್ಟಿ ರೆಂಜಾಳ್, ಮುಂಬೈ

ವ್ಯವಸ್ಥಾಪಕ: ನಾವು ಪ್ರಯೋಗಿಸಿದ ನಾಟಕದ ಬಗ್ಗೆ ಜನಗಳ ಪ್ರತಿಕ್ರಿಯೆ ಏನು?

ಕಾರ್ಯದರ್ಶಿ: ಕೆಲವರಿಗೆ ಹಿಡಿಸಿದರೆ, ಕೆಲವರಿಗೆ ಹಿಡಿಸಿಲ್ಲ ಸಾರ್.

ವ್ಯವಸ್ಥಾಪಕ: ಯಾರಿಗೆ ಹಿಡಿಸಿಲ್ಲ?

ಕಾರ್ಯದರ್ಶಿ: ನಮಗೆ ಮಾತ್ರ ಹಿಡಿಸಿದೆ, ಪ್ರೇಕ್ಷಕರಿಗೆ ಹಿಡಿಸಿಲ್ಲ ಸಾರ್!

★★★

ರಾಮು: ಏನೋ ಗುಂಡ ಪತ್ತೇದಾರಿ, ಓದುತ್ತಿದ್ದೆಯಲ್ಲ, ಕೊಲೆಗಾರ ಯಾರು ಅಂತ ಗೊತ್ತಾಯ್ತೆ?



ಗುಂಡ: ಗೊತ್ತಾಯ್ತು, ಕೊಲೆಗಾರರು ಇಬ್ಬರು, ಒಬ್ಬ ಈ ಪುಸ್ತಕ ಬರೆದೋನು, ಇನ್ನೊಬ್ಬ ಈ ಪುಸ್ತಕ ಓದು ಅಂತ ಕೊಟ್ಟೋನು?

★★★

ಶಾಂತಮ್ಮ: ನೋಡಿ, ನಮ್ಮವರು ವೃದ್ಧಾಶ್ರಮ ಮಾಡಿದ್ದಾರೆ, ನಿಮ್ಮ ಕಡೆಯಿಂದ ಏನಾದರೂ ಸಹಾಯ ಮಾಡ್ತೀರಾ?'

ನಾಗಮ್ಮ: 'ಖಂಡಿತ, ಹೇಗಿದ್ದರೂ ನಮ್ಮ ಅತ್ತೆ-ಮಾವ ಜೊತೆಯಲ್ಲಿದ್ದಾರೆ. ಅವರನ್ನು ತಂದು ಸೇರಿಸ್ತೇನೆ!'

(ಸಂ): ಶಂಕರೇಗೌಡ, ತುಂಬಕೆರೆ, ಮಂಡ್ಯ



### ಕುಡಿಯುವ ಸಂದರ್ಭ

ಡಾಕ್ಟರ್: ಕುಡಿಯುವ ಅಭ್ಯಾಸ ಇದೆಯಾ?

ರೋಗಿ: ಸಾಂದರ್ಭಿಕವಾಗಿ.

ಡಾಕ್ಟರ್: ಸಾಮಾನ್ಯವಾಗಿ ಯಾವ ಸಂದರ್ಭ?

ರೋಗಿ: ಸೂರ್ಯಾಸ್ತ.

(ಸಂ): ನೀಲಕಂಠಪ್ಪ, ಹಾಸನ